## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ. ಕೆ. ಹರಿಪ್ರಸಾದ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 927**

**ಉತ್ತರಿಸಬೇಕಾದ ದಿನಾಂಕ : 21.12.2021**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳಾವವು; ಈ ಯೋಜನೆಗಳ ಮಾನದಂಡಗಳೇನು; | ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು 2020-21 ನೇ ಸಾಲಿನಲ್ಲಿ ರೂಪಿಸಿರುವ ಯೋಜನೆಗಳು ಈ ಕೆಳಕಂಡಂತಿದೆ.<br>1) ಅಲ್ಪಾವಧಿ ಬೆಳೆ ಸಾಲ ಹಾಗೂ ಹೈನುಗಾರಿಕೆ ಉದ್ದೇಶಕ್ಕಾಗಿ ಕೆ.ಸಿ.ಸಿ.ಸಾಲ<br>2) ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳು<br>3) ಸ್ವ-ಸಹಾಯ ಗುಂಪುಗಳಿಗೆ ವಿತರಿಸಿದ ಸಾಲಗಳ ಮೇಲಿನ ಬಡ್ಡಿ ಸಹಾಯಧನ<br>4) ಬಡವರ ಬಂಧು<br>5) ಕಾಯಕ<br>6) ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆ<br>7) ಪ.ಜಾ/ಪ.ಪಂ/ಹಿಂದುಳಿದವರ್ಗ/ಅಲ್ಪಸಂಖ್ಯಾತ ವರ್ಗ/ಮಹಿಳೆ/ ವಿಕಲಚೇತನ/ ಬಿಪಿಎಲ್‌ದಾರರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ಬಿಡುಗಡೆ ಮಾಡುವ ಯೋಜನೆ.<br>8) ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ ಯೋಜನೆಯಡಿಯಲ್ಲಿ ಅನುದಾನ ಮಂಜೂರು ಮಾಡುವ ಯೋಜನೆ<br>9) ಪ.ಜಾ/ಪ.ಪಂ/ಹಿಂದುಳಿದ ವರ್ಗ/ಅಲ್ಪಸಂಖ್ಯಾತ ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಧನ ಬಿಡುಗಡೆ ಮಾಡುವ ಯೋಜನೆ.<br>ಮೇಲಿನ ಯೋಜನೆಗಳ ಮಾನದಂಡಗಳ ಸಂಪೂರ್ಣ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |

ಆ) ಸಹಕಾರ ಇಲಾಖೆಯಿಂದ ರೂಪಿಸಿರುವ ಈ ಯೋಜನೆಗಳಿಗಾಗಿ ಕಳೆದ ವರ್ಷದಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು; ಯಾವ ಯಾವ ಯೋಜನೆಗೆ ಎಷ್ಟೆಷ್ಟು ಅನುದಾನ ಖರ್ಚಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

ಸಹಕಾರ ಇಲಾಖೆಯಿಂದ ರೂಪಿಸಿರುವ ಈ ಯೋಜನೆಗಳಿಗಾಗಿ 2020-21 ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಖರ್ಚಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|---|
| 1 | ಅಲ್ಪಾವಧಿ ಬೆಳೆ ಸಾಲ ಹಾಗೂ ಹೈನುಗಾರಿಕೆ ಉದ್ದೇಶಕ್ಕಾಗಿ ಕೆ.ಸಿ.ಸಿ.ಸಾಲ | 74,986.50 | 74,986.50 |
| 2 | ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳಿಗೆ ಬಡ್ಡಿ ಸಹಾಯಧನ | 24,346.00 | 24,346.00 |
| 3 | ಸ್ವ-ಸಹಾಯ ಗುಂಪುಗಳಿಗೆ ವಿತರಿಸಿದ ಸಾಲಗಳ ಮೇಲಿನ ಬಡ್ಡಿ ಸಹಾಯಧನ | 8,649.99 | 8,649.99 |
| 4 | ಬಡವರ ಬಂಧು | 27.50 | 27.50 |
| 5 | ಕಾಯಕ | 90.00 | 90.00 |
| 6 | ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆ | 26,011.50 | 26,011.50 |
| 7 | ಪ.ಜಾ/ಪ.ಪಂ/ಹಿಂದುಳಿದವರ್ಗ/ಅಲ್ಪಸಂಖ್ಯಾತ ವರ್ಗ/ಮಹಿಳೆ/ ವಿಕಲಚೇತನ/ ಬಿಪಿಎಲ್‌ದಾರರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ಬಿಡುಗಡೆ ಮಾಡುವ ಯೋಜನೆ. | 222.00 | 222.00 |
| 8 | ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ ಯೋಜನೆಯಡಿಯಲ್ಲಿ ಅನುದಾನ ಮಂಜೂರು ಮಾಡುವ ಯೋಜನೆ | 1,100.00 | 25.00 |
| 9 | ಪ.ಜಾ/ಪ.ಪಂ/ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಧನ ಬಿಡುಗಡೆ ಮಾಡುವ ಯೋಜನೆ | 25.00 | 25.00 |

| | | |
|---|---|---|
| ಇ) | ಸದರಿ ಯೋಜನೆಗಳ ಅನುಕೂಲ ಪಡೆಯಲು ಕಳೆದ ವರ್ಷದಲ್ಲಿ ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ? | ಸದರಿ ಯೋಜನೆಗಳ ಅನುಕೂಲ ಪಡೆಯಲು 2020-21 ನೇ ಸಾಲಿನಲ್ಲಿ ಸ್ವೀಕೃತವಾದ ಅರ್ಜಿಗಳ ವಿವರ ಈ ಕೆಳಕಂಡಂತಿದೆ. |

| ಕ್ರ ಸಂ | ಯೋಜನೆಯ ಹೆಸರು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ |
|---|---|---|
| 1 | ಅಲ್ಪಾವಧಿ ಬೆಳೆ ಸಾಲ ಹಾಗೂ ಹೈನುಗಾರಿಕೆ ಉದ್ದೇಶಕ್ಕಾಗಿ ಕೆ.ಸಿ.ಸಿ.ಸಾಲ | 2,40,386 |
| 2 | ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳು | 1,94,138 |
| 3 | ಸ್ವ-ಸಹಾಯ ಗುಂಪುಗಳಿಗೆ ವಿತರಿಸಿದ ಸಾಲಗಳ ಮೇಲಿನ ಬಡ್ಡಿ ಸಹಾಯಧನ | 59,344 |
| 4 | ಬಡವರ ಬಂಧು | 12,520 |
| 5 | ಕಾಯಕ | 665 ಸಂಘಗಳು |
| 6 | ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆ | 63,462 |
| 7 | ಪ.ಜಾ/ಪ.ಪಂ/ಹಿಂದುಳಿದವರ್ಗ/ಅಲ್ಪಸಂಖ್ಯಾತ ವರ್ಗ/ಮಹಿಳೆ/ ವಿಕಲಚೇತನ/ ಬಿಪಿಎಲ್‌ದಾರರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ಬಿಡುಗಡೆ ಮಾಡುವ ಯೋಜನೆ. | 48,632 |
| 8 | ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ ಯೋಜನೆಯಡಿಯಲ್ಲಿ ಅನುದಾನ ಮಂಜೂರು ಮಾಡುವ ಯೋಜನೆ | 15 ಸಂಘಗಳು |
| 9 | ಪ.ಜಾ/ಪ.ಪಂ/ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಧನ ಬಿಡುಗಡೆ ಮಾಡುವ ಯೋಜನೆ | 19 ಸಂಘಗಳು |

**ಸಂಖ್ಯೆ: ಸಿಒ 378 ಸಿಎಲ್ಎಸ್ 2021**

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 927 ಕ್ಕೆ ಅನುಬಂಧ

| ಕ್ರ. ಸಂ | ಯೋಜನೆಗಳ ಹೆಸರು | ಮಾನದಂಡಗಳು |
|---|---|---|
| 1) | ಅಲ್ಪಾವಧಿ ಬೆಳೆ ಸಾಲ ಹಾಗೂ ಹೈನುಗಾರಿಕೆ ಉದ್ದೇಶಕ್ಕಾಗಿ ಕೆ.ಸಿ.ಸಿ.ಸಾಲ | ➢ ರೂ. 3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಮತ್ತು ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳವಾಗಿ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.<br>➢ ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು.<br>➢ ಆಧಾರ್ ಮತ್ತು ಆರ್‌ಟಿಸಿ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು. ಸದರಿ ಆರ್‌ಟಿಸಿ ಮೇಲೆ ಇತರೇ ಬ್ಯಾಂಕುಗಳಲ್ಲಿ ಬೆಳೆ ಸಾಲ ಪಡೆದಿರಬಾರದು.<br>➢ ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮರುಪಾವತಿಸಬೇಕು. |
| 2) | ಮಧ್ಯಮಾವಧಿ/ ದೀರ್ಘಾವಧಿ ಕೃಷಿ ಸಾಲ | ➢ ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು.<br>➢ ಭೂಮಿ ದಾಖಲೆಗಳು, ಭದ್ರತೆಗೆ ಬೇಕಾದ ದಾಖಲೆಗಳು ಮತ್ತು ಯೋಜನಾ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು.<br>➢ ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿಯನ್ನು ಪಾವತಿಸಬೇಕು. |
| 3) | ಸ್ವ ಸಹಾಯ ಸಂಘಗಳ ಮೇಲಿನ ಬಡ್ಡಿ ಸಹಾಯಧನ | ➢ ಡಿಸಿಸಿ ಬ್ಯಾಂಕುಗಳು ತಮ್ಮ ಶಾಖೆಗಳ ಮೂಲಕ ರೂ.5.00ಲಕ್ಷದವರೆಗಿನ ಸಾಲಗಳನ್ನು ಮಹಿಳಾ ಸ್ವಸಹಾಯ ಗುಂಪುಗಳಿಗೆ ನಿವ್ವಳ ಶೂನ್ಯ ಬಡ್ಡಿದರದಲ್ಲಿ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ನಿವ್ವಳ ಶೇ.4 ರ ಬಡ್ಡಿ ದರ ಅನ್ವಯವಾಗುವಂತೆ ಸಾಲ ವಿತರಿಸಲಾಗುತ್ತಿದೆ.<br>➢ ಸ್ವ ಸಹಾಯ ಗುಂಪು ಕನಿಷ್ಠ 6 ತಿಂಗಳ ಅವಧಿಯಿಂದ ಕ್ರಿಯಾಶೀಲ ಅಸ್ತಿತ್ವದಲ್ಲಿ ಇರಬೇಕು ಹಾಗೂ ಗುಂಪಿನಲ್ಲಿ ಕನಿಷ್ಠ 10 ರಿಂದ ಗರಿಷ್ಠ 20 ಸದಸ್ಯರನ್ನು ಹೊಂದಿರತಕ್ಕದ್ದು.<br>➢ ಸ್ವಸಹಾಯ ಗುಂಪುಗಳು ತನ್ನ ಸದಸ್ಯರಿಗೆ ಮಾತ್ರ ಸಾಲ ವಿತರಿಸತಕ್ಕದ್ದು, ಸ್ವಸಹಾಯ ಗುಂಪುಗಳು ತನ್ನ ಸದಸ್ಯರಿಗೆ ವಿತರಿಸುವ ಎಲ್ಲಾ ಸಾಲಗಳನ್ನೂ (ಬ್ಯಾಂಕಿನ ಸಾಲ ಮತ್ತು ತನ್ನ ಸ್ವಂತ ಬಂಡವಾಳದ ಸಾಲ ಸೇರಿ) ಡಿಸಿಸಿ ಬ್ಯಾಂಕಿನಲ್ಲಿ ಸದಸ್ಯರು ಹೊಂದಿರುವ ಉಳಿತಾಯ ಖಾತೆಗಳ ಮೂಲಕವೇ ವಿತರಿಸತಕ್ಕದ್ದು. ಇದಕ್ಕಾಗಿ ಪ್ರಾರಂಭದಲ್ಲಿ ಡಿಸಿಸಿ ಬ್ಯಾಂಕುಗಳು ಸ್ವಸಹಾಯ ಗುಂಪುಗಳ ಸದಸ್ಯರು ಶೂನ್ಯ ಬಾಲೆನ್ಸ್‌ನ ಉಳಿತಾಯ ಖಾತೆಗಳನ್ನು ತೆರೆಯಲು ಅವಕಾಶ ಮಾಡಿಕೊಡತಕ್ಕದ್ದು |
| 4) | ಬಡವರ ಬಂಧು | ➢ ಬೀದಿ ವ್ಯಾಪಾರಿಗಳು/ಸಣ್ಣ ವ್ಯಾಪಾರಿಗಳು ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್‌ಗಳ ಪ್ರತಿ ಮತ್ತು ತಾವು ವ್ಯಾಪಾರದ ನಡೆಸುತ್ತಿರುವ ಸ್ಥಳದ ಪೋಟೋ ಮತ್ತು ಸ್ಥಳೀಯ ಸಂಸ್ಥೆಗಳು ಗುರುತಿನ ಚೀಟಿಯೊಂದಿಗೆ ಡಿಸಿಸಿ ಬ್ಯಾಂಕುಗಳು ನಿಗದಿಪಡಿಸಿದ ಅರ್ಜಿಯನ್ನು ಡಿಸಿಸಿ ಬ್ಯಾಂಕಿನ ಮೊಬೈಲ್ ಘಟಕ ಅಥವಾ ಶಾಖೆಗೆ ಸಲ್ಲಿಸುವುದು<br>➢ ಡಿಸಿಸಿ ಬ್ಯಾಂಕುಗಳು ಫಲಾನುಭವಿಗಳ ಶೂನ್ಯ ಬ್ಯಾಲೆನ್ಸ್ ಉಳಿತಾಯ ಖಾತೆಯನ್ನು (ಬೇಸಿಕ್ ಸೇವಿಂಗ್ ಬ್ಯಾಂಕ್ ಅಕೌಂಟ್) ತೆರೆಯಬೇಕು<br>➢ ಸಾಲದ ಮರುಪಾವತಿಯ ಅವಧಿಯು ಆರು ತಿಂಗಳ ಇರುತ್ತದೆ<br>➢ ದೈನಂದಿನ ಚಾಲ್ತಿ ಹೊರಬಾಕಿ ಆಧಾರವಾಗಿ ಸರ್ಕಾರದಿಂದ ತ್ರೈಮಾಸಿಕವಾಗಿ ಶೇ.10 ರ ಬಡ್ಡಿ ಸಹಾಯಧನ ಹಾಗೂ ಶೇ.1 ರ ಪ್ರೋತ್ಸಾಹ ಧನವನ್ನು ಒದಗಿಸಲಾಗುವುದು. |

| | | |
|---|---|---|
| 5) | ಕಾಯಕ | ➢ ಡಿಸಿಸಿ ಬ್ಯಾಂಕುಗಳು ತಮ್ಮ ಶಾಖೆಗಳ ಮೂಲಕ ರೂ.5.00ಲಕ್ಷದವರೆಗಿನ ಸಾಲಗಳನ್ನು ಮಹಿಳಾ ಸ್ವಸಹಾಯ ಗುಂಪುಗಳಿಗೆ ನಿವ್ವಳ ಶೂನ್ಯ ಬಡ್ಡಿದರದಲ್ಲಿ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ನಿವ್ವಳ ಶೇ.4 ರ ಬಡ್ಡಿ ದರ ಅನ್ವಯವಾಗುವಂತೆ ಸಾಲ ವಿತರಿಸಲಾಗುತ್ತಿದೆ.<br>➢ ಸ್ವ ಸಹಾಯ ಗುಂಪುಗಳ ಎಲ್ಲಾ ಸದಸ್ಯರ ಗುರುತಿನ ಚೀಟಿ, ಆಧಾರ್ ಸಂಖ್ಯೆ, ಯೋಜನಾ ಘಟಕದ ಪೋಟೋ ವಿವರಗಳನ್ನೊಳಗೊಂಡ ದಾಖಲಾತಿಗಳನ್ನು ಸಲ್ಲಿಸಬೇಕು.<br>➢ 10 ಕ್ಕಿಂತ ಹೆಚ್ಚು ಹಾಗೂ 20 ಕ್ಕಿಂತ ಕಡಿಮೆ ಸದಸ್ಯರನ್ನು ಒಳಗೊಂಡಿರಬೇಕು |
| 6) | ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆ | ➢ ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದು ದಿ: 31-01-2020 ಕ್ಕೆ ಸುಸ್ತಿಯಾಗಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.<br>➢ ಈ ಯೋಜನೆ ನಬಾರ್ಡ ಗುರುತಿಸಿದ ಕೃಷಿ/ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ ಅಂದರೆ ಲಘು ನೀರಾವಾರಿ, ಭೂ ಅಭಿವೃದ್ಧಿ, ಸಾವಯವ ಕೃಷಿ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ, ಕೃಷಿ ಉದ್ದೇಶಗಳಿಗೆ ಮಾತ್ರ ಅನ್ವಯವಾಗುತ್ತದೆ. |
| 7) | ಪ.ಜಾ/ಪ.ಪಂ/ ಹಿಂದುಳಿದವರ್ಗ/ಅಲ್ಪಸಂಖ್ಯಾತ ವರ್ಗ/ ಮಹಿಳೆ/ ವಿಕಲಚೇತನ/ ಬಿಪಿಎಲ್‌ದಾರರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ಬಿಡುಗಡೆ ಮಾಡುವ ಯೋಜನೆ. | ➢ ಸಂಘದ ಒಂದು ಷೇರಿನ ಮೌಲ್ಯವನ್ನು ಪರಿಗಣಿಸಿ ನೊಂದಾಯಿಸುವ ಸದಸ್ಯರ ಪ್ರತ್ಯೇಕವಾಗಿ ಪಟ್ಟಿ ಮಾಡಿ ಪ್ರಸ್ತಾವನೆ ಸಲ್ಲಿಸತಕ್ಕದ್ದು<br>➢ ಪ್ರಸ್ತಾವನೆಗಳನ್ನು ಸಲ್ಲಿಸುವ ಮೊದಲು ಪ್ರಸ್ತಾವನೆ ಪಡೆಯಬೇಕೆಂದಿರುವ ಅಂತಹ ಸಹಕಾರ ಸಂಘಗಳಿಗೆ ಜಿಲ್ಲೆಯ ಕ್ಷೇತ್ರಾಧಿಕಾರಿಗಳು ಸಂಘಕ್ಕೆ ಖುದ್ದು ಭೇಟಿ ನೀಡಿ, ಸಂಘದ ಕಾರ್ಯ ವೈಖರಿಯ ಬಗ್ಗೆ ಪರಿಶೀಲಿಸಿ ಕಾರ್ಯನಿರ್ವಹಿಸುತ್ತಿರುವಂತಹ ಅರ್ಹ ಸಹಕಾರ ಸಂಘಗಳ ಪ್ರಸ್ತಾವನೆಯನ್ನು ಮಾತ್ರ ಸಲ್ಲಿಸತಕ್ಕದ್ದು.<br>➢ ನಿಗದಿಪಡಿಸಿರುವ ನಮೂನೆ-1ರಲ್ಲಿ ಸಂಘದ ಕಾರ್ಯದರ್ಶಿ ಹಾಗೂ ಸಹಾಯಕ ನಿಬಂಧಕರ ಕಛೇರಿ ಮೊಹರು ಹಾಗೂ ಸಹಿ ಕಡ್ಡಾಯವಾಗಿರಬೇಕು<br>➢ ನಿಗದಿತ ನಮೂನೆ-2ರಲ್ಲಿ ಸಂಘದ ಕಾರ್ಯದರ್ಶಿ, ಉಪವಿಭಾಗದ ಸಹಾಯಕ ನಿಬಂಧಕರು ಹಾಗೂ ಜಿಲ್ಲಾ ಉಪ ನಿಬಂಧಕರ ಮೊಹರು ಹಾಗೂ ಸಹ ಕಡ್ಡಾಯವಾಗಿರಬೇಕು.<br>➢ ನಿಗದಿತ ನಮೂನೆ-3 ರಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದವರಿಂದ ಪ್ರಮಾಣ ಪತ್ರವನ್ನು ಸದಸ್ಯರಿಂದ ಪಡೆದು ಸಂಘದಲ್ಲಿ ಇಟ್ಟುಕೊಂಡಿರುವ ಬಗ್ಗೆ ದೃಢೀಕರಣ ಪತ್ರ.<br>➢ ನಿಗದಿತ ನಮೂನೆ -4 ರಲ್ಲಿ ಕಳೆದ ಮೂರು ವರ್ಷಗಳ ಸಂಘದ ಕಾರ್ಯವೈಖರಿ ಬಗ್ಗೆ ಮಾಹಿತಿ.<br>➢ ದಿನಾಂಕ:1.6.2020ರ ನಂತರದ ಸಂಘದ ಆಡಳಿತ ಮಂಡಳಿ ಠರಾವು<br>➢ ಕಳೆದ 2 ವರ್ಷಗಳ ಲೆಕ್ಕಪರಿಶೋಧನಾ ವರದಿಯ ಆರ್ಥಿಕ ತಃಖ್ತೆಗಳ ದೃಢೀಕೃತ ಪ್ರತಿ.<br>➢ ಸಂಘದ ಷೇರಿನ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಬೈಲಾ ಪ್ರತಿ.<br>➢ ಕಳೆದ 5 ವರ್ಷಗಳಿಂದ ಸದರಿ ಯೋಜನೆಯಡಿ ಪಡೆದಿರಬಹುದಾದ ಸಹಾಯಧನದ ಬಗ್ಗೆ ಮಾಹಿತಿಯನ್ನು ಪರಿಶೀಲಿಸಿ, ಸಹಾಯಧನ ಪಡೆಯದೇ ಇರುವ ಸಹಕಾರ ಸಂಘಗಳ ಪ್ರಸ್ತಾವನೆಯನ್ನು ಆದ್ಯತೆಯ ಮೇರೆಗೆ ಸಲ್ಲಿಸತಕ್ಕದ್ದು.<br>➢ ಸಂಘಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ / ಭೂ ಅಭಿವೃದ್ಧಿ ಬ್ಯಾಂಕ್ / ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಇವುಗಳಿಗೆ ಪ್ರಥಮ ಆದ್ಯತೆಯನ್ನು ನೀಡುವುದು ತದನಂತರದಲ್ಲಿ ಇನ್ನಿತರೆ ಸಹಕಾರ ಸಂಘಗಳನ್ನು ಪರಿಗಣಿಸಬಹುದು. |

<table>
<tr>
<td></td>
<td></td>
<td>ಸರಕುಪಟ್ಟಿಗಳನ್ನು (ಇನ್‌ವಾಯ್ಸ್‌ಗಳನ್ನು) ಸಲ್ಲಿಸತಕ್ಕದ್ದು<br><u>ಹಣ ಮಂಜೂರಾತಿಯ ಮಿತಿ:</u><br>
<table>
<tr><td>ಅ) ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯುಳ್ಳ ಸಹಕಾರ ಸಂಘಗಳು</td><td>ರೂ.1,00,000-00</td></tr>
<tr><td>ಆ) ತಾಲ್ಲೂಕು / ಜಿಲ್ಲಾ ಮಟ್ಟದವರೆಗಿನ ಸಹಕಾರ ಸಂಘಗಳಿಗೆ</td><td>ರೂ.2,00,000-00</td></tr>
<tr><td>ಇ) ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಮತ್ತು ರಾಜ್ಯ ಮಟ್ಟದ ಸಹಕಾರ ಸಂಘಗಳಿಗೆ</td><td>ರೂ.3,00,000-00</td></tr>
</table>
</td>
</tr>
<tr>
<td>9)</td>
<td>ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ ಯೋಜನೆಯಡಿಯಲ್ಲಿ ಅನುದಾನ ಮಂಜೂರು ಮಾಡುವ ಯೋಜನೆ</td>
<td>➢ ಕಳೆದ ಮೂರು ವರ್ಷಗಳ ಆರ್ಥಿಕ ತಃಖ್ತೆ<br>➢ ಆರ್ಥಿಕ ನೆರವಿನ ಮಂಜೂರಾತಿಗಾಗಿ ನಿಗದಿತ ನಮೂನೆಯಲ್ಲಿ ಹಿಂದಿನ ಸಾಲಿನ ಮಾರ್ಚ್ ಅಂತ್ಯಕ್ಕೆ ಇದ್ದಂತೆ ಮಾಹಿತಿ.<br>➢ ಸಂಬಂಧಿಸಿದ ಲ್ಯಾಂಪ್ಸ್ ಸಹಕಾರ ಸಂಘದ ಉಪ ನಿಯಮದ ದೃಢೀಕೃತ ಪ್ರತಿ.<br>➢ ನೋಂದಣಿಯಾದಾಗಿನಿಂದ ಲ್ಯಾಂಪ್ಸ್ ಸಹಕಾರ ಸಂಘಗಳು ನಿರ್ವಹಿಸುತ್ತಿರುವ ಕಾರ್ಯ ಚಟುವಟಿಕೆಗಳು ಮತ್ತು ಮುಂದಿನ ಸಾಲುಗಳಲ್ಲಿ ನಿರ್ವಹಿಸಲು ಉದ್ದೇಶಿಸಿರುವ ಕಾರ್ಯ ಚಟುವಟಕೆಗಳ ಬಗ್ಗೆ ವಿವರವಾದ ಟಿಪ್ಪಣಿ (ಪ್ರಗತಿಯ ವರ್ಷವಾರು ಅಂಕಿ ಅಂಶಗಳ ಮಾಹಿತಿಯ ತಃಖ್ತೆ ಸಹಿತ)<br>➢ ಲ್ಯಾಂಪ್ಸ್ ಸಹಕಾರ ಸಂಘಗಳು ಕಳೆದ ಸಾಲಿನಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ರೂಪಿಸಿದ್ದರೆ ಅದರ ವಿವರ ಹಾಗೂ ಗುರಿ ಮತ್ತು ಸಾಧನೆಗಳ ವಿವರವಾದ ವರದಿ.<br>➢ ಸರ್ಕಾರದಿಂದ ನೆರವಿನ ಮಂಜೂರಾತಿಗಾಗಿ ಕೋರಿ ಲ್ಯಾಂಪ್ಸ್ ಸಹಕಾರ ಸಂಘಗಳಿಂದ ಆಡಳಿತ ಮಂಡಳಿಯಲ್ಲಿ ಅಂಗೀಕರಿಸಿರುವ ಠರಾವಿನ ಪ್ರತಿ.<br>➢ ಲ್ಯಾಂಪ್ಸ್ ಸಹಕಾರ ಸಂಘಗಳು ಸದರಿ ಯೋಜನೆಯಲ್ಲಿನ ಉದ್ದೇಶಿತ ಎಲ್ಲಾ ಕಾಮಗಾರಿಗೆ ಸಂಬಂದಿಸಿದಂತೆ ನೀಲನಕ್ಷೆ ಹಾಗೂ ಅಂದಾಜು ಪಟ್ಟಿಯನ್ನು ಆದೇಶ ಸಂಖ್ಯೆ: ಪಿಡಬ್ಲ್ಯೂಡಿ671/2009 ದಿನಾಂಕ:03/02/2010 ರನ್ವಯ ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.</td>
</tr>
</table>

**ಸಹಕಾರ ಸಂಘಗಳ ಅಪರ ನಿಬಂಧಕರು**

**(ಪತ್ತು)**

| | | |
|---|---|---|
| | | ➢ ಇನ್ನಿತರೆ ಸಹಕಾರ ಸಂಘಗಳನ್ನು ಪರಿಗಣಿಸುವಾಗ ಸಂಘದ ವ್ಯವಹಾರ, ಲೆಕ್ಕಪರಿಶೋಧನೆ, ಸಂಘದ ಸ್ಥಿತಿಗತಿಗಳನ್ನು ಪರಿಶೀಲಿಸಿ, ಕಾರ್ಯವೈಖರಿಯನ್ನು ನಮೂನೆ-4ರಲ್ಲಿ ಕ್ರಮಬದ್ಧವಾಗಿ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.<br>➢ ಹಿಂದುಳಿದ / ಅಲ್ಪಸಂಖ್ಯಾತ / ಅಲೆಮಾರಿ/ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಗಳ ಬಗ್ಗೆ ಮಾಹಿತಿಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ: ಬಿಸಿ 12016/34/76 ಎಸ್‌ಸಿಟಿ-ವಿ, ದಿನಾಂಕ:27.7.1997 (ಪ.ಜಾ/ಪ.ಪಂ) ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಮಾಹಿತಿಯನ್ನು ಸಮಾಜ ಕಲ್ಯಾಣ ಸಚಿವಾಲಯದ ಆದೇಶ ಸಂಖ್ಯೆ: ಸಇ/225/ಬಿಸಿಎ/2000, ದಿನಾಂಕ:30.3.2002 (ಕರ್ನಾಟಕ ರಾಜ್ಯ ಪತ್ರ ದಿನಾಂಕ:11.4.2002) (ಹಿಂದುಳಿದ ವರ್ಗ) ರಂತೆ ಪ್ರಕಟಿಸಲಾಗಿದೆ. ಈ ಆದೇಶದಲ್ಲಿರುವ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸಲ್ಲಿಸತಕ್ಕದ್ದು. ಸದರಿ ಆದೇಶದ ಪ್ರತಿಯನ್ನು ಸ್ಥಳೀಯ ಸಮಾಜಕಲ್ಯಾಣ ಇಲಾಖೆಯ ಕಛೇರಿಯಿಂದ ಪಡೆಯಬಹುದಾಗಿದೆ. |
| 8) | ಪ.ಜಾ/ ಪ.ಪಂ/ ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಧನ ಬಿಡುಗಡೆ ಮಾಡುವ ಯೋಜನೆ | ➢ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ / ಹಿಂದುಳಿದ ವರ್ಗ / ಅಲ್ಪಸಂಖ್ಯಾತರ ಸಹಕಾರ ಸಂಘಗಳು ಮಾತ್ರ ಈ ಯೋಜನೆಯಡಿ ಆರ್ಥಿಕ ನೆರವು ಪಡೆಯಲು ಅರ್ಹತೆ ಹೊಂದಿರುತ್ತವೆ.<br>➢ ಈ ಕುರಿತು ಸಂಬಂಧಪಟ್ಟ ಸಹಕಾರ ಸಂಘದ ಬೈಲಾವನ್ನು ಪರಿಶೀಲಿಸಿ, ಸ್ಪಷ್ಟವಾಗಿ ಜಿಲ್ಲೆ ಸಹಕಾರ ಸಂಘಗಳ ಉಪನಿಬಂಧಕರುಗಳಿಂದ ದೃಢೀಕರಿಸತಕ್ಕದ್ದು. ಹಾಗೂ ಬೈಲಾ ಪ್ರತಿಯನ್ನು ಲಗತ್ತಿಸತಕ್ಕದ್ದು.<br>➢ ಆರ್ಥಿಕ ನೆರವು ಪಡೆಯುವ ಸಹಕಾರ ಸಂಘವು ಕಳೆದ 3 ವರ್ಷಗಳಲ್ಲಿ ಕಾರ್ಯನಿರತ ಚಟುವಟಿಕೆಗಳನ್ನು ಹೊಂದಿ ಲಾಭದಲ್ಲಿರಬೇಕು.<br>➢ ಕಳೆದ 3 ವರ್ಷಗಳ ಆಡಿಟ್ ಆಗಿರುವ ಆರ್ಥಿಕ ತಃಖ್ತೆಗಳು ಲೆಕ್ಕಪರಿಶೋಧಕರಿಂದ ದೃಢೀಕರಿಸಲ್ಪಟ್ಟಿರುವಂತವುಗಳನ್ನು ಪ್ರಸ್ತಾವನೆಯೊಂದಿಗೆ ತಪ್ಪದೇ ಲಗತ್ತಿಸತಕ್ಕದ್ದು.<br>➢ ಸಹಕಾರ ಸಂಘವು ಕೋರುವ ಸಹಾಯಧನಕ್ಕೆ ಸಮವಾಗಿ ಸಂಘದಲ್ಲಿ ಸದಸ್ಯರಿಂದ ಪಾವತಿಯಾದ ಷೇರು ಬಂಡವಾಳ ಹೊಂದಿರುವ ಬಗ್ಗೆ ಸಂಘದ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರುಗಳಿಂದ ದೃಢೀಕರಣ ನೀಡತಕ್ಕದ್ದು ಮತ್ತು ಹಣಕಾಸಿನ ತಃಖ್ತೆ ಲಗತ್ತಿಸಿರಬೇಕು.<br>➢ ಹೊಸದಾಗಿ ನೊಂದಣಿಯಾಗಿರುವ ಸಹಕಾರ ಸಂಘಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ. (ಅಂದರೆ 3 ವರ್ಷಗಳ ಲೆಕ್ಕಪರಿಶೋಧನೆಯ ಆರ್ಥಿಕ ತಃಖ್ತೆಗಳಿಲ್ಲದ ಸಂಘಗಳು)<br>➢ ಈ ಯೋಜನೆ ಜಾರಿಗೆ ಬಂದ ನಂತರ ಈಗಾಗಲೇ ಆರ್ಥಿಕ ನೆರವು ಪಡೆದಿರುವಂತಹ ಸಹಕಾರ ಸಂಘಗಳ ಪ್ರಸ್ತಾವನೆಯನ್ನು ಪುನಃ ಸಲ್ಲಿಸತಕ್ಕದ್ದಲ್ಲ.<br>**ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಹೊಂದಲು ಹಣಕಾಸು ನೆರವನ್ನು ನೀಡಲಾಗುತ್ತದೆ.**<br><br>(ಅ) **ಬಂಡವಾಳ ಹೂಡಿಕೆ:-** ನಿವೇಶನ ಖರೀದಿಸಲು, ಕಟ್ಟಡ ಖರೀದಿ, ಕಟ್ಟಡ ಕಟ್ಟಲು ಸಂಘದ ಹಾಲಿ ಕಟ್ಟಡ ದುರಸ್ತಿ, ಉತ್ಪದನಾ ಮಾರಾಟ ಮಳಿಗೆ ಕಟ್ಟಲು, ಗೋದಾಮು ಕಟ್ಟಡ ಕಟ್ಟಲು.<br>(ಆ) **ಯಂತ್ರೋಪಕರಣಗಳು:-** ಪವರ್ ಟಿಲ್ಲರ್ ಖರೀದಿ, ಟ್ರ್ಯಾಕ್ಟರ್ ಖರೀದಿ, ಅಗತ್ಯವಿರುವ ಉಪಕರಣಗಳ ಖರೀದಿ, ಕಚ್ಚಾ ವಸ್ತುಗಳನ್ನು ಸಂಸ್ಕರಿಸಲು ಬೇಕಾದ ಯಂತ್ರೋಪಕರಣಗಳನ್ನು ಖರೀದಿಸಲು, ಉತ್ಪದನಾ ಘಟಕಗಳನ್ನು ತೆರೆಯಲು (ಸಹಾಯಧನ ಕೋರುವ ಸಹಕಾರ ಸಂಘವು ಯಂತ್ರೋಪಕರಣಗಳನ್ನು ಮಾರಾಟ ಮಾಡುವ ಬೇರೆ ಬೇರೆ ಅಧಿಕೃತ ಮಾರಾಟಗಾರರಿಂದ ಕನಿಷ್ಟ ಮೂರು ಸರಕು ಪಟ್ಟಿ (ಇನ್‌ವಾಯ್ಸ್) ಗಳನ್ನು ಸಲ್ಲಿಸತಕ್ಕದ್ದು.)<br>(ಇ) **ಸಂಘದ ಆಧುನೀಕರಣ:-** ಬ್ಯಾಂಕಿಂಗ್ ಕೌಂಟರ್ ತೆರೆಯುವಿಕೆಗೆ ಪೀಠೋಪಕರಣಗಳ ಖರೀದಿ, ಕಂಪ್ಯೂಟರ್ ಮತ್ತು ಅದರ ಉಪಕರಣಗಳ ಖರೀದಿ, ಪ್ಯಾಕ್ಸ್/ಜೆರಾಕ್ಸ್ ಖರೀದಿ, (ಸಹಾಯಧನ ಕೋರುವ ಸಹಕಾರ ಸಂಘವು ಯಂತ್ರೋಪಕರಣಗಳನ್ನು / ಪೀಠೋಪಕರಣಗಳನ್ನು ಮಾರಾಟ ಮಾಡುವ ಅಧಿಕೃತ ಮಾರಾಟಗಾರರಿಂದ ಕನಿಷ್ಟ ಮೂರು |